ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರು (ಯಲಹಂಕ ವಲಯ)ರವರ ಕಛೇರಿ, ಬ್ಯಾಟರಾಯನಪುರ ಬೆಂಗಳೂರು-92

ಸಂ: ಮು.ಅ(ಯ)/ಮಾ.ತಾ.ಮಂ/02 /2022-23 ದಿನಾಂಕ: 24.04.2023

ಮಾರ್ಪಾಡು ತಾಂತ್ರಿಕ ಮಂಜೂರಾತಿ

ವಿಷಯ: Drilling of borewells and providing water supply facilities to ward no- 01, 02 ,03 & 04 ಕಾಮಗಾರಿಯ ಮಾರ್ಪಾಡು ಅಂದಾಜು ಮೊತ್ತ ರೂ,1,02,62,286.15ಗಳು **(Including GST)**

ಉಲ್ಲೇಖ:
1. ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬಿ12(1)ಪಿಆರ್/394/21-22, ದಿನಾಂಕ:18-01-2022.
2. ಆಡಳಿತಾತ್ಮಕ ಅನುಮೋದನೆ ಸಂಖ್ಯೆ:ಕಾ.ಪಾ.ಅ/ಯ.ವಿ/ಆ.ಅ/ಪಿಆರ್/47/2022-23 ದಿನಾಂಕ:28-03-2023
3. ಮೂಲತಾಂತ್ರಿಕ ಮಂಜೂರಾತಿ ಮೆಮೋ ಸಂಖ್ಯೆ: ಮು.ಅ/ಯ.ವ/ತಾಂ.ಅ/ಪಿಆರ್/186/2022-23, ದಿನಾಂಕ:08-03-2023
4. ಲೆಕ್ಕಶೀರ್ಷಿಕೆ ಪಿ-3075, ಜಾಬ್ ಸಂಖ್ಯೆ:004-23-000022

****

ಮೇಲಿನ ವಿಷಯದಲ್ಲಿ ತಿಳಿಸಿರುವ ಕಾಮಗಾರಿಗೆ ಉಲ್ಲೇಖ (3)ರಂತೆ ತಾಂತ್ರಿಕ ಮಂಜೂರಾತಿ ದೊರೆತಿದ್ದು, ಸದರಿ ಕಾಮಗಾರಿಯ ಅವಶ್ಯಕತೆಗೆ ಅನುಗುಣವಾಗಿ ಮೂಲ ಅಂದಾಜು ಪಟ್ಟಿಯಲ್ಲಿ ಕೆಲವು ಮಾರ್ಪಾಡು ಮಾಡಿ ಮಾರ್ಪಾಡು ಅಂದಾಜು ಪಟ್ಟಿಯನ್ನು ತಯಾರಿಸಿ ಮುಖ್ಯ ಅಭಿಯಂತರರು (ಯಲಹಂಕ) ರವರ ಆದೇಶದಂತೆ ಸದರಿ ಮಾರ್ಪಾಡು ಅಂದಾಜು ಪಟ್ಟಿಯನ್ನು ಪರಿಶೀಸಿದ್ದು, ರೂ,1,02,62,286.15ಗಳು(**ಒಂದು ಕೋಟಿ ಎರಡುಲಕ್ಷದ ಅರವತ್ತೆರಡು ಸಾವಿರದ ಎರಡುನೂರ ಎಂಬತ್ತಾರು ರೂ ಹದಿನೈದು ಪೈಗಳು ಮಾತ್ರ (Including GST)**ಮಾರ್ಪಾಡು ತಾಂತ್ರಿಕ ಮಂಜೂರಾತಿ ಪುಸ್ತಕದ ಪುಟ ಸಂಖ್ಯೆ: 02 ಕ್ರಮ ಸಂಖ್ಯೆ: 02 ರಲ್ಲಿ ನಮೂದಿಸಿ, ಅನುಮೋದಿತ ಮೂಲ ಅಂದಾಜು ಪಟ್ಟಿಗೆ ನೀಡಲಾಗಿದ್ದ ತಾಂತ್ರಿಕ ಮಂಜೂರಾತಿಯನ್ನು ರದ್ದುಗೊಳಿಸಿ, ಈ ಕೆಳಗಿನ ಷರತ್ತುಗೊಳಪಡಿಸಿ ಮಾರ್ಪಾಡು ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಸಹಿ/-
ಮುಖ್ಯ ಅಭಿಯಂತರರು (ಯಲಹಂಕ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಈ ಕೆಳಕಂಡ ನಿಬಂಧನೆ/ಷರತ್ತುಗಳನ್ನು ಕಾರ್ಯಪಾಲಕ ಅಭಿಯಂತರರು ರವರು ಕಡ್ಡಾಯವಾಗಿ ಪಾಲಿಸುವುದು

1. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೋಟೆಷನ್ ಕರೆದು ಅನುಮೋದನೆ ಪಡೆಯುವುದು.
3. ಇಡಿಗಂಟು (Lumpsum/Miscellaneous Amount) ವೆಚ್ಚದ ಸಮಯದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.

ಪು.ತಿ.ನೋ...

ಸಂಖ್ಯೆ: ಮು.ಅ.(ಯ)/ತಾ.ಮಂ/ 02 /2022–23, ದಿನಾಂಕ: 24.04.2023

4. ಕಡತ ಪರಿಶೀಲನೆ ಹಾಗೂ ಕಾಮಗಾರಿ ಅನುಷ್ಠಾನಗೊಳಿಸುವ ಸಮಯದಲ್ಲಿ ಈ ಕೆಳಕಂಡ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸುವುದು.

- ಮು.ಅ(ಜಾ ಮತ್ತು ಪಿ.ಪಿ.ಇ.ಡಿ)/ಪಿಆರ್/18/12–13, ದಿನಾಂಕ: 19–01–2013
- ಪ್ರ.ಅ/ಪಿಆರ್/1040/13–14, ದಿನಾಂಕ: 04–09–2013
- ಆ/ಪ್ರ.ಅ/ಪಿಆರ್/7639/12–13, ದಿನಾಂಕ: 17–10–2012
- ಆ/ಪಿಆರ್/7844/12–13, ದಿನಾಂಕ: 09–01–2013

5. ಮಾನ್ಯ ಆಯುಕ್ತರು ರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: ಬಿಬಿಎಂಪಿ/ಆ/ಪಿಆರ್/6166/2019–20, ದಿನಾಂಕ: 13–12–2019ರಂತೆ ಸೂಕ್ತ ಕ್ರಮಕ್ಕೈಗೊಳ್ಳುವುದು.
6. ಪಾಲಿಕೆ ವ್ಯಾಪ್ತಿಯಲ್ಲಿನ ಕಾಮಗಾರಿ ಅನುಷ್ಠಾನಗೊಳಿಸುವಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತಾಗಿ ಮಾನ್ಯ ಆಯುಕ್ತರು ರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: ಬಿಬಿಎಂಪಿ/ಆ/ಪಿಆರ್/5287/2019–20, ದಿನಾಂಕ: 05–11–2019ರಲ್ಲಿ ಸೂಚಿಸಿರುವ ಕ್ರಮಗಳನ್ವಯ ನಿಯಮಾನುಸಾರ ಅನುಷ್ಠಾನಗೊಳಿಸುವುದು.
7. ಧೃಢೀಕೃತ ನಿರ್ದೇಶನದ ನಕಾಶೆ ಹಾಗೂ ಕಾಮಗಾರಿ ಸ್ಥಳದಿಂದ ಪ್ರಸ್ತಾಪಿತ ಡಂಪಿಂಗ್ ಯಾರ್ಡ್ ಸ್ಥಳದ ಅನುಮೋದನೆ ಪಡೆಯುವುದು.
8. ರಸ್ತೆ ಇತಿಹಾಸ ಪುಸ್ತಕದಲ್ಲಿ ಕಾಮಗಾರಿಯ ಕೆಲಸಗಳಾದ ಚಿಪ್‌ಕಾರ್ಪೆಟಿಂಗ್, ಜೆಲ್ಲಿರಸ್ತೆ, ಡಾಂಬರೀಕರಣದ ಕೆಲಸವನ್ನು ನಮೂದಿಸುವುದು.
9. ನಿಗಧಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವುದು. ಸಾಧ್ಯವಾಗದ ಪಕ್ಷದಲ್ಲಿ ಕಾಲಾವಧಿ ವಿಸ್ತರಣೆಯನ್ನು ಸೂಕ್ತ ಸಮಜಾಯಿಷಿಯೊಂದಿಗೆ/ವಿವರವಾದ ಸಮಂಜಸ ವರದಿ ನೀಡಿ ಕಾಲಾವಧಿ ವಿಸ್ತರಣೆ ಪಡೆಯುವುದು.
10. ಸದರಿ ಕೈಗೊಳ್ಳುವ ಕಾಮಗಾರಿಯು ಪುನರಾವರ್ತನೆ ಅಥವಾ ನಕಲು ಆಗಿರುವುದಿಲ್ಲವೆಂಬ ಬಗ್ಗೆ ಸಂಬಂಧಪಟ್ಟ ಅಭಿಯಂತರರು ಟಿಪ್ಪಣಿ ಹಾಳೆಯಲ್ಲಿ ಹಾಗೂ ಅಂದಾಜು ಪಟ್ಟಿಯಲ್ಲಿ ದೃಢೀಕರಿಸುವುದು.
11. ಮೇಲಾಧಿಕಾರಿಗಳಿಗೆ ಮಾಹಿತಿ ಒದಗಿಸುವಲ್ಲಿ ಮರೆಮಾಚಿದಲ್ಲಿ ಹಾಗೂ ಅಂದಾಜು ಪಟ್ಟಿ ತಯಾರಿಸುವಲ್ಲಿ ಯಾವುದಾದರೂ ಲೋಪದೋಷಗಳು ಕಂಡು ಬಂದಲ್ಲಿ, ಸಂಬಂಧಪಟ್ಟ ವಾರ್ಡಿನ ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಕಾರ್ಯಪಾಲಕ ಅಭಿಯಂತರರನ್ನು ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.
12. ಕಾಮಗಾರಿಯ ಗುಣಮಟ್ಟವನ್ನು ಕಾಯ್ದಿರಿಸುವ ಬಗ್ಗೆ ಸಂಬಂಧಪಟ್ಟ ವಾರ್ಡಿನ ಸಹಾಯಕ ಅಭಿಯಂತರರು/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಕಾರ್ಯಪಾಲಕ ಅಭಿಯಂತರರನ್ನು ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.

ಮುಖ್ಯ ಅಭಿಯಂತರರು (ಯಲಹಂಕ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1) ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ಯಲಹಂಕ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
2) ಕಛೇರಿ ಕಡತಕ್ಕೆ.